ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ
DIRECTORATE OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BANGALORE - 560 085
Email: dsert.kar@nic.in Website: http://dsert.kar.nic.in

Phone : 080 - 26422372, 26422373, 26422374, Fax - 26422377

ಡಿಎಸ್‌ಇಆರ್‌ಟಿ
DSERT

(ಶಿತ2)ಹಿಸನಿ/ಡಿ.ಇಡಿಪ.ಪರಿಷ್ಕರಣೆ/12-13

ದಿನಾಂಕ. 08/05/2013

## ಜ್ಞಾಪನಾ

ವಿಷಯ : ಪರಿಷ್ಕೃತ ಪಠ್ಯವಸ್ತು ಮತ್ತು ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಡಿ.ಇಡಿ ಉಪನ್ಯಾಸಕರ 2ನೇ ಹಂತದ ತರಬೇತಿ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಪರಿಷ್ಕೃತ ಡಿ.ಇಡಿ. ಪಠ್ಯವಸ್ತು ಮತ್ತು ಪಠ್ಯಕ್ರಮಕ್ಕೆ ಸಂಬಂಧಿಸದಂತೆ ರಾಜ್ಯ ಮಟ್ಟದಲ್ಲಿ ಪ್ರಧಾನ ಸಂಪನ್ಮೂಲ ವ್ಯಕ್ತಿಗಳಿಗೆ ಮೊದಲ ಹಂತದ ತರಬೇತಿಯನ್ನು ಈಗಾಗಲೇ ನೀಡಲಾಗಿದೆ.

ಸದರಿ ಪ್ರಧಾನ ಸಂಪನ್ಮೂಲ ವ್ಯಕ್ತಿಗಳಿಗೆ ಎರಡನೇ ಹಂತದ ಸನಿವಾಸ ತರಬೇತಿಯನ್ನು ದಿನಾಂಕ 20/05/2013 ರಿಂದ 25/05/2013 ರವರೆಗೆ ಆರ್.ವಿ.ಇ.ಸಿ.(RV Consortium) (ಆರ್.ವಿ ಶಿಕ್ಷಣ ಸಂಸ್ಥೆ), ಜಯನಗರ ಬೆಂಗಳೂರು-04 ಇಲ್ಲಿ ಆಯೋಜಿಸಿದೆ.

ಸದರಿ ತರಬೇತಿಗೆ ನಿಮ್ಮ ಜಿಲ್ಲೆಯಲ್ಲಿನ ಈಗಾಗಲೇ ಮೊದಲ ಹಂತದಲ್ಲಿ ತರಬೇತಿಗೊಂಡಿರುವ ಪ್ರಧಾನ ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಲು ಆದೇಶಿಸಿದೆ. ನಿಯೋಜಿಸಿದವರನ್ನು ಕಡ್ಡಾಯವಾಗಿ ತರಬೇತಿಗೆ ಹಾಜರಾಗಲು ಸೂಚಿಸಿ ಸಕಾಲದಲ್ಲಿ ಬಿಡುಗಡೆ ಮಾಡಲು ತಿಳಿಸಿದೆ. ಶಿಬಿರಾರ್ಥಿಗಳು 20/05/2013ರ ಬೆಳಿಗ್ಗೆ 8.30ಕ್ಕೆ ಸರಿಯಾಗಿ ತರಬೇತಿ ನಡೆಯುವ ಸ್ಥಳದಲ್ಲಿ ಹಾಜರಾಗಲು ಸೂಚಿಸಿದೆ.

ಮುಂದುವರೆದು, ತರಬೇತಿ ಹೊಂದುವ ಪ್ರಧಾನ ಸಂಪನ್ಮೂಲ ವ್ಯಕ್ತಿಗಳು ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಡಯಟ್, ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ ,ಅನುದಾನಸಹಿತ ಹಾಗೂ ಅನುದಾನರಹಿತ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿನ ಉಳಿದ ಎಲ್ಲಾ ಉಪನ್ಯಾಸಕರಿಗೆ ತರಬೇತಿ ನೀಡುವರು. ಜಿಲ್ಲಾ ಮಟ್ಟದ ತರಬೇತಿಯನ್ನು ಜೂನ್ ಮಾಹೆಯ 2ನೇ ವಾರದಲ್ಲಿ ಹಮ್ಮಿಕೊಳ್ಳಬೇಕಾಗುವುದು. ಈ ಸಂಬಂಧ ಕೆಳಕಂಡ ಮಾಹಿತಿಯನ್ನು ಅಗತ್ಯವಾಗಿ ತರಬೇತಿಗೆ ಹಾಜರಾಗುವ ಸಂಬಂಧಪಟ್ಟ ಡಯಟ್ ನ ಉಪನ್ಯಾಸಕರು ತರಲು ತಿಳಿಸಿದೆ.

| | ಡಯಟ್ | ಸರ್ಕಾರಿ ಟಿ.ಟಿ.ಐ | ಅನುದಾನಿತ ಟಿ.ಟಿ.ಐ | ಅನುದಾನರಹಿತ ಟಿ.ಟಿ.ಐ |
|---|---|---|---|---|
| ಶಿಕ್ಷಕರ ಶಿಕ್ಷಣ ಸಂಸ್ಥೆಗಳ ಸಂಖ್ಯೆ | | | | |
| ಶಿಕ್ಷಕರ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕ ಸಿಬ್ಬಂದಿ ವಿವರ (ವಿಷಯವಾರು) (ಭಾಷೆ (ಕನ್ನಡ ಮತ್ತು ಇಂಗ್ಲೀಷ್) ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ) | | | | |

ನಿರ್ದೇಶಕರು,
ಡಿ.ಎಸ್.ಇ.ಆರ್ ಟಿ

ಪ್ರತಿಗಳು:
1) ರಾಜ್ಯದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರಿಗೆ
2) ಕಚೇರಿ ಪ್ರತಿ